# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/143/ಸಾ.ಸ/2018-19

ಜ್ಞಾನ ಭಾರತಿ
ಬೆಂಗಳೂರು-560 056
ದಿನಾಂಕ: 01-10-2018

**ಗೆ,**

***ಸಿಂಡಿಕೇಟ್ ಸದಸ್ಯರು,***
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು.

**ಮಾನ್ಯರೆ,**

**ವಿಷಯ:** ದಿನಾಂಕ 24-09-2018ರಂದು ಜರುಗಿದ 143ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳು.

***

ದಿನಾಂಕ 24-09-2018ರಂದು ಬೆಳಿಗ್ಗೆ 11.00 ಗಂಟೆಗೆ ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001, ಇಲ್ಲಿ ಜರುಗಿದ 143ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಕುಲಸಚಿವರು**

ಲಗತ್ತು: ಮೇಲಿನಂತೆ.

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/143/ಸಾ.ಸ./2018-19

ಜ್ಞಾನ ಭಾರತಿ
ಬೆಂಗಳೂರು-560 056
ದಿನಾಂಕ: 01-10-2018

**ದಿನಾಂಕ 24-09-2018 ರಂದು ಬೆಳಿಗ್ಗೆ 11.00 ಗಂಟೆಗೆ ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001, ಇಲ್ಲಿ ಜರುಗಿದ 143ನೇ ಸಿಂಡಿಕೇಟ್ ಸಭೆಯ ನಡವಳಿಗಳು.**

<u>ಹಾಜರಾದ ಸದಸ್ಯರು:</u>

| | | | |
|---|---|---|---|
| 1. | ಪ್ರೊ. ವೇಣುಗೋಪಾಲ್ ಕೆ.ಆರ್.<br>ಕುಲಪತಿಗಳು | - | ಸಭಾಧ್ಯಕ್ಷರು |
| 2. | ಶ್ರೀ ವಸಂತಕುಮಾರ | - | ಸದಸ್ಯರು |
| 3. | ಶ್ರೀ ಜಿ. ಶಿವಣ್ಣ | - | ಸದಸ್ಯರು |
| 4. | ಪ್ರೊ. ಎಂ. ಮುನಿನಾರಾಯಣಪ್ಪ | - | ಸದಸ್ಯರು |
| 5. | ಪ್ರೊ. ಎನ್.ಎಸ್. ಅಶೋಕ್ ಕುಮಾರ್ | - | ಸದಸ್ಯರು |
| 6. | ಪ್ರೊ. ಶಿವರಾಜು ಸಿ<br>ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 7. | ಪ್ರೊ. ಬಿ. ಕೆ. ರವಿ<br>ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |

ಮೊದಲಿಗೆ ಕುಲಸಚಿವರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಡಾ॥ ಎನ್. ಎಸ್. ಅಶೋಕ್ ಕುಮಾರ್ ಅವರು ಹಿರಿಯ ಪ್ರಾಧ್ಯಾಪಕರಾಗಿ ಮೊದಲ ಬಾರಿಗೆ ಸಿಂಡಿಕೇಟ್ ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಸಭೆಗೆ ಪರಿಚಯಿಸಿ, ಅವರನ್ನು ಅಭಿನಂದಿಸಿ, ಸಭೆಯ ಕಾರ್ಯ-ಕಲಾಪಗಳನ್ನು ನಡೆಸಿಕೊಡಲು ಮಾನ್ಯ ಕುಲಪತಿಗಳನ್ನು ಕೋರಿದರು.

ಕುಲಪತಿಗಳು ಮಾತನಾಡಿ ಸಭೆಗೆ ಎಲ್ಲಾ ಸದಸ್ಯರನ್ನು ಮತ್ತೊಮ್ಮೆ ಸಭೆಗೆ ಸ್ವಾಗತಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

***Proceedings of the 143rd meeting of the Syndicate held on 24.09.2018***

**ವಿಷಯ ಸಂಖ್ಯೆ 1:** ದಿನಾಂಕ 04.08.2018 ರಂದು ಜರುಗಿದ 142ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 04.08.2018 ರಂದು ಜರುಗಿದ 142ನೇ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಸಿಂಡಿಕೇಟ್ ಅನುಮೋದಿಸಿ ಸ್ಥಿರೀಕರಿಸಿತು:

***Proceedings of the 143rd meeting of the Syndicate held on 24.09.2018***

**ವಿಷಯ ಸಂಖ್ಯೆ 2:** ದಿನಾಂಕ 04.08.2018 ರಂದು ಜರುಗಿದ 142ನೇ ಸಿಂಡಿಕೇಟ್ ಸಭೆಯ ನಡಾವಳಿಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR)

**ನಿರ್ಣಯ:**

ದಿನಾಂಕ 04.08.2018 ರಂದು ಜರುಗಿದ 142ನೇ ಸಿಂಡಿಕೇಟ್ ಸಭೆಯ ನಡಾವಳಿಗಳಿಗೆ ತೆಗೆದುಕೊಂಡ ಕ್ರಮದ ಬಗೆಗಿನ ಅನುಸರಣಾ ವರದಿಗಳು (ATR) ಗಳನ್ನು ಕೆಳಕಂಡ ಚರ್ಚೆ ಮತ್ತು ಮಾರ್ಪಾಡುಗಳೊಂದಿಗೆ ಸಿಂಡಿಕೇಟ್ ಅನುಮೋದಿಸಿತು.:

1. Referring to the earlier decision, Sri B. Shivanna and Prof. M. Muninarayanappa wanted to know the action taken on floating fresh tenders for allotment of shops located at Jnana Bharathi Campus, opening up of a Food Court in the Campus and also to set up Xerox centre near Pareeksha Bhavan. The Registrar informed that the action has already initiated to call for tenders. Sri Vasanthkumar opined that all these matters may be discussed at the Campus Development Committee and a decision may be taken based on the report of the Campus Development Committee. After detailed discussion, it was resolved to refer the file on the above matters to the Campus Development Committee for discussion and to take action on the recommendations of the said Committee.

2. Referring to the earlier decision, Sri Vasantha Kumara and Sri Shivanna B, opined that engaging the services of Home Guards would be burden to the University as the expenditure will be on higher side as compared to hiring of Security Guards for campus security. The Registrar said that the Vice-Chancellor may be authorised to take a decision. The Vice-Chancellor replied that in order to strengthen the security system, it was decided to hire services of Home Guards from the Police Department. It will enable to fix the responsibility for any loss or theft in the campus. After one year the matter may be reviewed. Further, he informed that these facts also have been brought to the kind notice of the Hon'ble Minister for Higher Education.

   After detailed discussions, the Syndicate resolved unanimously to engage the services of Home Guards w.e.f. 1st October, 2018.

3. Sri Shivanna B, reminded the decision taken at the earlier Syndicate and wanted to know the action taken by the University with regard to rain water harvesting. He also opined that a committee may visit M/s. Toyota Industrial plant to look at the rain water harvesting system adopted by them. The Vice-Chancellor replied that the interested Organizations would be called for to make presentations and thereafter a decision will be taken.

4. Sri Shivanna B, suggested to arrange for centralised food system for all the hostels to minimise the cost. The Vice-Chancellor informed that there is a plan to construct a mega mess for this purpose and it will be taken up soon.

5. Prof. M. Muninarayanappa said that reservation in the appointment of teaching posts should be made applicable by taking into consideration the department – wise posts. The Registrar replied that the action would

be taken as per the directions of University Grants Commission and the State Government.

6. Referring to the earlier decision, Sri Vasantha Kumara pointed out that the results of all the genuine students of Akash International College who have been transferred to other colleges have not been released so far. He urged to release the results of the Students. The Registrar (Evaluation) informed that the results of students who have got transferred to KLE College and NRI Institute have already been released. He assured that the results of genuine students who got transferred to PVP 1st Grade College would be released at the earliest.

7. Referring to the earlier decision, Sri Vasantha Kumara wanted to know the action taken on release of bill amount to M/s. Atris Technologies, Bengaluru. The Vice-Chancellor informed the Syndicate that the said firm has agreed to give a discount in their final bill to the tune of Rs. 25.00 lakhs. After, the receipt of the revised bill, the bill will be settled immediately.

8. Referring to the earlier decision permitting the Chairpersons / Faculty members to open savings bank account for organizing seminars / workshops, Prof. M. Muninarayanppa brought to the notice of the Syndicate that some of the faculty members / Departments of Studies have misused the funds received from the colleges / organization towards Seminars / workshops. He urged to constitute a Committee to enquire into the misappropriation of funds. After detailed discussions, the Syndicate resolved to authorise the Vice-Chancellor to constitute a Committee in this regard.

9. Referring to the earlier decision, Sri Shivanna B, wanted to know the action taken by the University on improvement of infrastructure at the

University Hostels. The Vice-Chancellor informed that the Works Committee has already approved the proposals to take up repair and also construction of new hostels. The proceedings of the Works Committee in this regard has been placed before the Syndicate for approval.

10. Sri B. Shivanna and Sri Vasanthakumar wanted to know the action taken on the decision of the Syndicate with regard to payment of revised consolidated pay/salary to the outsource employees. The Vice-Chancellor briefed the Syndicate the objections raised by the Finance Officer in the above matter. After detailed discussions, the Syndicate reiterated its decision to enhance the consolidated pay/salary of outsource employees by Rs. 5,000/- per month, on par with minimum wages act and directed the University to implement the said decision immediately.

***Proceedings of the 143rd meeting of the Syndicate held on 24.09.2018***

**ವಿಷಯ ಸಂಖ್ಯೆ 3:** ಶ್ರೀಮತಿ ವಂದನಾ. ಎಂ.ಕೆ, ಸಹಾಯಕರು, ಪತ್ರಿಕೋದ್ಯಮ ವಿಭಾಗ, ಇವರ ವಿಚಾರಣಾ ವರದಿಯನ್ನಾಧರಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀಮತಿ ವಂದನಾ. ಎಂ.ಕೆ, ಸಹಾಯಕರು, ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ, ಇವರು ವಿಭಾಗದಲ್ಲಿ ದಿನಾಂಕ:08-01-2018ರಂದು ನಡೆಯಬೇಕಿದ್ದ 3ನೇ ಸೆಮಿಸ್ಟರ್ ಎಂ.ಎ. ಪದವಿ ಪರೀಕ್ಷೆಯ 3.4 Television Broadcasting ಪ್ರಶ್ನೆ ಪತ್ರಿಕೆಯ ಬಂಡಲ್‌ಗಳನ್ನು ವಿತರಣಾ ಕೇಂದ್ರದಿಂದ ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗಕ್ಕೆ ತರುವ ಸಂದರ್ಭದಲ್ಲಿ ಕಳೆದುಹಾಕಿರುವ ಬಗ್ಗೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾ ಅಧಿಕಾರಿಗಳು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಒಪ್ಪಿ, ಶ್ರೀಮತಿ ವಂದನಾ. ಎಂ.ಕೆ, ಅವರ ನಿರ್ಲಕ್ಷ್ಯತೆಯನ್ನು ಖಂಡಿಸಿ, ಅವರಿಗೆ ಕೊನೆಯ ಬಾರಿ ಎಂಬಂತೆ ಎಚ್ಚರಿಕೆ ನೀಡಿ ಜಾಗರೂಕತೆಯಿಂದ ಕಾರ್ಯ ನಿರ್ವಹಿಸುವಂತೆ ಸೂಚಿಸಲು, ಸಿಂಡಿಕೇಟ್ ನಿರ್ಣಯಿಸಿತು.

*Proceedings of the 143rd meeting of the Syndicate held on 24.09.2018*

**ವಿಷಯ ಸಂಖ್ಯೆ 4:** ಶ್ರೀ ಡಿ. ವಾಸುದೇವನ್, ಸಹಾಯಕ ನಿರ್ದೇಶಕರು (ತಾಂತ್ರಿಕ) ಇವರ ನಿಯೋಜನಾ ಸೇವಾ ಷರತ್ತು ಮತ್ತು ನಿಬಂಧನೆಗಳನ್ನು ಅಂಗೀಕರಿಸುವ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ, ಶ್ರೀ ಡಿ. ವಾಸುದೇವನ್, ಸಹಾಯಕ ನಿರ್ದೇಶಕರು (ತಾಂತ್ರಿಕ), ಸರ್ಕಾರಿ ಕೇಂದ್ರ ಮುದ್ರಣಾಲಯ (ಘಟಕ-2), ಇವರ ನಿಯೋಜನಾ ಸೇವಾ ಷರತ್ತು ಮತ್ತು ನಿಬಂಧನೆಗಳನ್ನು ಸಿಂಡಿಕೇಟ್ ಅಂಗೀಕರಿಸಿತು.

*Proceedings of the 143rd meeting of the Syndicate held on 24.09.2018*

**ವಿಷಯ ಸಂಖ್ಯೆ 5:** ಶ್ರೀ ಕೇಶವರೆಡ್ಡಿ, ಗ್ರೂಪ್ 'ಡಿ' ಬೆಂಗಳೂರು ವಿಶ್ವವಿದ್ಯಾಲಯ, ಇವರು ಅನಧಿಕೃತ ಗೈರುಹಾಜರಾಗಿರುವುದರಿಂದ ಇವರ ವಿರುದ್ಧ ತಯಾರಿಸಲಾದ ದೋಷರೋಪಣಾ ಪಟ್ಟಿಯ (Article of Charges) ಅನುಮೋದನೆಯ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ, ಶ್ರೀ ಕೇಶವರೆಡ್ಡಿ, ಗ್ರೂಪ್ 'ಡಿ' ಬೆಂಗಳೂರು ವಿಶ್ವವಿದ್ಯಾಲಯ, ಇವರು 2125 ದಿನಗಳ ಅನಧಿಕೃತ ಗೈರುಹಾಜರಾತಿಯ ಬಗ್ಗೆ, ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 28.8 (3)ರ ಅನುಸಾರ, ಶಿಸ್ತಿನ ಕ್ರಮ ಜರುಗಿಸಲು ಸಿದ್ದಪಡಿಸಿರುವ ದೋಷರೋಪಣಾ ಪಟ್ಟಿಗಳನ್ನು (Article of Charges) ಸಿಂಡಿಕೇಟ್ ಅನುಮೋದಿಸಿ, ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸಲು ಕುಲಪತಿಗಳಿಗೆ ಅಧೀಕರಿಸಿ ನಿರ್ಣಯಿಸಿತು.

*Proceedings of the 143rd meeting of the Syndicate held on 24.09.2018*

**Item No. 6:** To consider the Draft Statute relating to Cadre and Recruitment Rules of Computer Programmer-reg.

***Resolution:***

After detailed discussions, it was resolved that a comprehensive Statutes for all the cadres of technical posts including the technical posts of UVCE be prepared and to place the same before the Syndicate at the earliest.

*Proceedings of the 143rd meeting of the Syndicate held on 24.09.2018*

**ವಿಷಯ ಸಂಖ್ಯೆ 7:** ಶ್ರೀ ಎನ್.ಆರ್. ಶ್ರೀನಿವಾಸ್, ಪ್ರಯೋಗಾಲಯ ಸಹಾಯಕರು (ನಿವೃತ್ತ) Physical Chemistry ವಿಭಾಗದಲ್ಲಿ ಇವರ ಸೇವೆಯನ್ನು ಕ್ರೋಢೀಕೃತ ಮಾಸಿಕ ವೇತನದಲ್ಲಿ ಮುಂದುವರೆಸುವ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ, ಶ್ರೀ ಎನ್.ಆರ್. ಶ್ರೀನಿವಾಸ್, ಪ್ರಯೋಗಾಲಯ ಸಹಾಯಕರು (ನಿವೃತ್ತ) Physical Chemistry ವಿಭಾಗ, ಇವರ ಸೇವೆಯನ್ನು ಹಾಲಿ ನೀಡುತ್ತಿರುವ ಕ್ರೋಢೀಕೃತ ಮಾಸಿಕ ವೇತನದೊಂದಿಗೆ 6(ಆರು) ತಿಂಗಳುಗಳ ಅವಧಿಗೆ, ಕಾರ್ಯನಿರತ ಮೂರು ದಿನಗಳ ಬಿಡುವು ನೀಡಿ, ದಿನಾಂಕ: 05-04-2018ರಿಂದ ದಿನಾಂಕ: 30-09-2018ರ ವರೆಗೆ ಮುಂದುವರೆಸಲು ಹಾಗೂ ದಿನಾಂಕ: 30-09-2018ರಿಂದ ಮುಂದಿನ 6(ಆರು) ತಿಂಗಳುಗಳ ಅವಧಿಗೆ, ಕಾರ್ಯನಿರತ ಮೂರು ದಿನಗಳ ಬಿಡುವು ನೀಡಿ, ಅವರ ಸೇವೆಯನ್ನು ಮುಂದುವರೆಸಲು ಸಹ ಸಿಂಡಿಕೇಟ್ ಅನುಮೋದಿಸಿತು.

*Proceedings of the 143rd meeting of the Syndicate held on 24.09.2018*

**Item No. 8:** To enhance the consultation fee for Sri H. Vishwanath, working as Surveyor on contract basis BUB-reg.

***Resolution:***

After detailed discussions, the Syndicate resolved to enhance the consultation fee of Sri H. Vishwanath, who is working as Surveyor on contract basis from Rs.25,000/- to Rs.30,000/- per month. Further, resolved to appoint one more Surveyor to assist him.

*Proceedings of the 143rd meeting of the Syndicate held on 24.09.2018*

**Item No. 9:** To continue the services of Liaison Officer for Bangalore University at New Delhi-reg.

***Resolution:***

After detailed discussions, the Syndicate resolved to extend the services of Shri Rajashekar Savanur, the Liaison Officer for Bangalore University at New Delhi for period of one year with effect from 12-08-2018 on existing terms and conditions.

Prof. N.S. Ashok Kumar, suggested to send a Circular to all the departments with the details of the above Liason Officer to enable the faculty members to contact him whenever they visit U.G.C. Office at New Delhi for official work.

*Proceedings of the 143rd meeting of the Syndicate held on 24.09.2018*

**Item No. 10:** To ratify the action taken with regard to continuation of services of Legal Advisor in Bangalore University, Bengaluru-reg.

***Resolution:***

After detailed discussions, the Syndicate ratified the action taken by the University in continuing the services of Sri G.K. Bore Gowda, Legal Advisor for a further period of one year with effect from 29-04-2018 on a consolidated salary of Rs.60,000 per month plus conveyance of Rs.7,500 per month.

*Proceedings of the 143rd meeting of the Syndicate held on 24.09.2018*

**Item No. 11:** To continue the services of a Physical Education Instructor on outsource basis for conducting Sports activities in UVCE – reg.

***Resolution:***

After detailed discussions, the Syndicate resolved to continue the services of a Physical Education Instructor on outsource basis for conducting Sports activities in UVCE, for a further period of six months with effect from 16-08-2018 by giving a break of three working days.

*Proceedings of the 143rd meeting of the Syndicate held on 24.09.2018*

**ವಿಷಯ ಸಂಖ್ಯೆ 12:** ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀ ಶಿವಾನಂದ ಎ. ಇವರ ಪರೀಕ್ಷಾರ್ಥ ಅವಧಿಯನ್ನು "ತೃಪ್ತಿಕರ" ಎಂದು ಘೋಷಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಅನುಕಂಪದ ಆಧಾರದ ಮೇಲೆ ನೇಮಕಗೊಂಡಿರುವ ಶ್ರೀ ಶಿವಾನಂದ ಎ. ಇವರ ಪರೀಕ್ಷಾರ್ಥ ಸೇವಾ ಅವಧಿಯು, ಕರ್ನಾಟಕ ನಾಗರೀಕ ಸೇವಾ (Probationary Period) ನಿಯಮ 1997(3) ಪ್ರಕಾರ ದಿನಾಂಕ: 28-06-2018ರಂದು ತೃಪ್ತಿಕರವಾಗಿ ಪೂರ್ಣಗೊಂಡಿದೆ ಎಂದು ಘೋಷಿಸಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 143rd meeting of the Syndicate held on 24.09.2018***

**ವಿಷಯ ಸಂಖ್ಯೆ. 13:** ಡಾ॥ ಕಾ.ವೆಂ. ಶ್ರೀನಿವಾಸ ಮೂರ್ತಿ, ಸಹ ಪ್ರಾಧ್ಯಾಪಕರು, ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯ ಇವರಿಗೆ ವಿ.ವಿ ಪರಿನಿಯಮ 28.17 ರನ್ವಯ ಸದರಿಯವರು ಮೇಲ್ಮನವಿ ಸಲ್ಲಿಸಲು ಆಗಿರುವ ವಿಳಂಬವನ್ನು ಮನ್ನಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಡಾ॥ ಕಾ.ವೆಂ. ಶ್ರೀನಿವಾಸ ಮೂರ್ತಿ, ಸಹ ಪ್ರಾಧ್ಯಾಪಕರು, ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯ ಇವರು ಸಕಾರಣಗಳೊಂದಿಗೆ ವಿಶ್ವವಿದ್ಯಾಲಯದ ಪರಿನಿಯಮಗಳು 28.16 ರಿಂದ 28.19 ರ ಅಡಿಯಲ್ಲಿ ಮೇಲ್ಮನವಿ ಸಲ್ಲಿಸಿದಲ್ಲಿ, ಆ ಮೇಲ್ಮನವಿಯನ್ನು ವಿಶ್ವವಿದ್ಯಾಲಯದ ಪರಿನಿಯಮ 28.21ರ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 143rd meeting of the Syndicate held on 24.09.2018***

**ವಿಷಯ ಸಂಖ್ಯೆ. 14:** ಡಾ॥ ಎಂ.ವಿ. ಉಷಾ ದೇವಿ, ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಇವರಿಗೆ ಸಬಾಟಿಕಲ್ ರಜೆಯನ್ನು ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಡಾ॥ ಎಂ.ವಿ. ಉಷಾ ದೇವಿ, ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಇವರಿಗೆ ಒಂದು ವರ್ಷದ ಅವಧಿಗೆ ದಿನಾಂಕ: 01-10-2018 ರಿಂದ 30-09-2019ರ ವರೆಗೆ ಸಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಸಿಂಡಿಕೇಟ್ ಅನುಮೋದಿಸಿತು.

***Proceedings of the 143rd meeting of the Syndicate held on 24.09.2018***

**Item No. 15**: To consider the report of the Expert Committee constituted for recognition of the Dalai Lama Institute for Higher Education Bidadi, as a Centre for Specified Studies/Specialized Studies and Research-reg.

***Resolution:***

After detailed discussions, the Syndicate resolved to approve the report of the Expert Committee constituted under the Chairmanship Prof. M.J. Vinod, Dean, Faculty of Arts, for recognition of the Dalai Lama Institute for Higher Education Bidadi, as a Centre for Specified Studies/Specialized Studies and Research u/s 66(1) of the K.S.U. Act, 2000 for offering Ph.D. and M.A. programme in Tibetan Studies from the academic year 2018-19.

**ವಿಷಯ ಸಂಖ್ಯೆ. 16**: 2018–19ನೇ ಸಾಲಿಗೆ ಕೆಲವು ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸುವ ಬಗೆಗೆ.

**ನಿರ್ಣಯ:**

ಚರ್ಚೆಯ ನಂತರ, ಆಕ್ಸ್‌ಬ್ರಿಡ್ಜ್ ಕಾಲೇಜ್ ಆಫ್ ಸೈನ್ಸ್ ಅಂಡ್ ಕಾಮರ್ಸ್ ಹಾಗೂ ಹೀರಾ ಕಾಲೇಜ್ ಆಫ್ ಕಾಮರ್ಸ್ ಕಾಲೇಜುಗಳು, ವಿಶ್ವವಿದ್ಯಾಲಯದ ಷೋಕಾಸ್ ನೋಟೀಸ್‌ಗೆ ಸಲ್ಲಿಸಿರುವ ಉತ್ತರ ಹಾಗೂ ವಿವರಣೆಯನ್ನು ಪರಿಶೀಲಿಸಲು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 63(5)ರಲ್ಲಿ, ನೇಮಕಗೊಂಡ ಪ್ರೊ. ಐ.ಎಸ್. ಶಿವಕುಮಾರ್ ಇವರ ಅಧ್ಯಕ್ಷತೆಯಲ್ಲಿನ ಸಮಿತಿಯ ವರದಿಗಳನ್ನು ಸಿಂಡಿಕೇಟ್ ಪರಿಗಣಿಸಿ, ಸದರಿ ಸಮಿತಿಯ ಶಿಫಾರಸ್ಸಿನನುಸಾರ 2018–19ನೇ ಸಾಲಿಗೆ, ಆಕ್ಸ್‌ಬ್ರಿಡ್ಜ್ ಕಾಲೇಜ್ ಆಫ್ ಸೈನ್ಸ್ ಅಂಡ್ ಕಾಮರ್ಸ್‌ನ ಸಂಯೋಜನಾ ನವೀಕರಣವನ್ನು ಮುಂದುವರೆಸಲು ಹಾಗೂ 2018–19ನೇ ಸಾಲಿನಿಂದ ಹೀರಾ ಕಾಲೇಜ್ ಆಫ್ ಕಾಮರ್ಸ್‌ನ ಸಂಯೋಜನೆಯನ್ನು ರದ್ದುಪಡಿಸಲು ನಿರ್ಣಯಿಸಿ, ಸದರಿ ಕಾಲೇಜಿಗೆ ಸಂಬಂಧಪಟ್ಟ ವರದಿಯನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ರವಾನಿಸಲು ತೀರ್ಮಾನಿಸಿತು.

***Proceedings of the 143rd meeting of the Syndicate held on 24.09.2018***

**ವಿಷಯ ಸಂಖ್ಯೆ. 17**: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ 66 ರನ್ವಯ ಪರಿಣಿತಿ/ವಿಶಿಷ್ಟ ಅಧ್ಯಯನಗಳನ್ನು ಹಾಗೂ ಅತ್ಯಂತ ವಿಶೇಷ ಮತ್ತು ಅನನ್ಯ ವ್ಯಾಸಂಗ ಕ್ರಮಗಳನ್ನು ನಡೆಸುವ ಸಂಸ್ಥೆ ಎಂದು ಮನ್ನಣೆ ನೀಡುವ ಬಗ್ಗೆ ಶುಲ್ಕಗಳನ್ನು ನಿಗಧಿಪಡಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕರಣ 66 ರನ್ವಯ ಪರಿಣಿತಿ/ವಿಶಿಷ್ಟ ಅಧ್ಯಯನಗಳನ್ನು ಹಾಗೂ ಅತ್ಯಂತ ವಿಶೇಷ ಮತ್ತು ಅನನ್ಯ ವ್ಯಾಸಂಗ ಕ್ರಮಗಳನ್ನು ನಡೆಸುವ ಸಂಸ್ಥೆಗಳಿಗೆ ಮನ್ನಣೆ ನೀಡುವ ಬಗ್ಗೆ ಶುಲ್ಕಗಳನ್ನು ನಿಗಧಿಪಡಿಸುವ ಕುರಿತು ರಚಿಸಲ್ಪಟ್ಟ ಪ್ರೊ. ಪ್ರದೀಪ್ ಜಿ ಸಿದ್ದೇಶ್ವರ, ನಿರ್ದೇಶಕರು, ಪಿ.ಎಂ.ಇ.ಬಿ, ಇವರ ಅಧ್ಯಕ್ಷತೆಯಲ್ಲಿನ ಸಮಿತಿಯ ವರದಿಯನ್ನು ಪರಿಗಣಿಸಿ ಅನುಮೋದಿಸಿತು. ಮುಂದುವರೆದು, ಕಲೆ, ಭಾಷೆ ಮತ್ತು ಸಂಸ್ಕೃತಿ ಬಗೆಗಿನ ವಿಶಿಷ್ಟ ಅಧ್ಯಯನ ಕೋರ್ಸುಗಳ ಪ್ರವೇಶ / ಮಾನ್ಯತಾ ಶುಲ್ಕದಲ್ಲಿ ಶೇ 50ರಷ್ಟು ರಿಯಾಯಿತಿ ನೀಡಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 143rd meeting of the Syndicate held on 24.09.2018*

**ವಿಷಯ ಸಂಖ್ಯೆ. 18:** ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜಿತ ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ನೋಂದಣಿ ದಿನಾಂಕದಿಂದ ಡಾ॥ ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿ ವೇತನ ಮಂಜೂರು ಮಾಡುವ ಮತ್ತು ಇನ್ನಿತರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ವಿಶ್ವವಿದ್ಯಾಲಯದ ಸಂಯೋಜಿತ ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ನೋಂದಣಿ ದಿನಾಂಕವಾದ ಸೆಪ್ಟಂಬರ್ 2016 ರಿಂದ ವಿದ್ಯಾರ್ಥಿ ವೇತನ ಮಂಜೂರು ಮಾಡಲು ಸಾಧ್ಯವಿಲ್ಲವೆಂದು ನಿರ್ಣಯಿಸಿ, ವಿಶ್ವವಿದ್ಯಾಲಯದ ಸಂಯೋಜಿತ ಸರ್ಕಾರಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 21 ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಮಾತ್ರ ನೀಡಲು ಸಿಂಡಿಕೇಟ್ ಅನುಮೋದಿಸಿತು.

*Proceedings of the 143rd meeting of the Syndicate held on 24.09.2018*

**ವಿಷಯ ಸಂಖ್ಯೆ. 19:** 2017–18ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿ, ಅನುಮೋದಿಸುವ ಬಗೆಗೆ.

**ನಿರ್ಣಯ:**

ಚರ್ಚೆಯ ನಂತರ, 2017–18ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 47(1) ಮತ್ತು (2)ರ ಅಡಿಯಲ್ಲಿ ಪರಿಗಣಿಸಿ ಸಿಂಡಿಕೇಟ್ ಅನುಮೋದಿಸಿತು.

*Proceedings of the 143rd meeting of the Syndicate held on 24.09.2018*

**ವಿಷಯ ಸಂಖ್ಯೆ.20:** ಶ್ರೀಮತಿ ಶೀತಲ್ ಗೌಡರ್, ನೋಂದಣಿ ಸಂಖ್ಯೆ 872B0045 ಇವರ ಬಿ.ಎಸ್ಸಿ, 2ನೇ ಮತ್ತು 3ನೇ ವರ್ಷದ ನಕಲು (Duplicate) ಅಂಕಪಟ್ಟಿ ಬಿಡುಗಡೆ ಮಾಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀಮತಿ ಶೀತಲ್ ಗೌಡರ್, ನೋಂದಣಿ ಸಂಖ್ಯೆ 872B0045 ಇವರು ಬಿ.ಎಸ್ಸಿ, 2ನೇ ಮತ್ತು 3ನೇ ವರ್ಷದ ರಸಾಯನಶಾಸ್ತ್ರ ವಿಷಯದಲ್ಲಿ ನಕಲು (Duplicate) ಅಂಕಪಟ್ಟಿ ಬಿಡುಗಡೆ ಮಾಡಲು ಸುಮಾರು 30 ವರ್ಷಗಳ ನಂತರ ಮನವಿಯನ್ನು ಸಲ್ಲಿಸಿದ್ದು, ವಿಶ್ವವಿದ್ಯಾಲಯದಲ್ಲಿ

ಸಂಬಂಧಪಟ್ಟ ಲೆಡ್ಜರ್ ಹಾಗೂ ಮೂಲ ಮಾರ್ಕ್ಸ್ ಲಿಸ್ಟ್‌ನಲ್ಲಿ ಯಾವುದೇ ದಾಖಲೆಗಳು ಲಭ್ಯವಿಲ್ಲದ ಕಾರಣ, ಅವರ ಮನವಿಯನ್ನು ತಿರಸ್ಕರಿಸಲು ಸಿಂಡಿಕೇಟ್ ನಿರ್ಣಯಿಸಿತು.



**Item No. 21**: Placing the legal opinion obtained in connection with procurement of MSIL Marks Cards, Degree Certificates and other certificates as per the decision of the Syndicate meeting held on 24.04.2017.

***Resolution:***

Prof. Muninarayanappa M. opined that a committee be constituted to peruse the notings made and decision taken in the concerned files and to submit a report.

Sri Shivanna B, pointed out that after the Syndicate decision, the then Registrar (Evaluation) has not followed the official procedures while procuring the marks cards from MSIL. This has resulted in financial loss to the exchequer. He urged not to accept the opinion of the Legal Advisor and to constitute a Committee to enquire into the matter.

After detailed discussions, the Syndicate resolved to constitute the following Committee to submit a report in the above matter:

1. The Vice-Chancellor - Chairman
2. The Registrar - Member
3. The Registrar(Evaluation) - Member
4. Sri Shivanna B - Member
5. Sri Vasanthakumara - Member
6. Prof. N.S. Ashok Kumar - Member
7. P.S. to Vice-Chancellor - Convenor

*Proceedings of the 143rd meeting of the Syndicate held on 24.09.2018*

**Item No. 22**: To consider nomination of three experts to the Selection Committees for selection/promotion of University teachers-reg.

***Resolution:***

After detailed discussions, the Syndicate approved the panel of experts in different subjects of Engineering as recommended by the Vice-Chancellor and resolved to authorise the Vice-Chancellor to nominate three experts from out of the panel on the Selection Committee in each subject of Engineering for selection of Asst. Professor, Associate Professor and Professor for direct recruitment and promotion under CAS.

*Proceedings of the 143rd meeting of the Syndicate held on 24.09.2018*

**ವಿಷಯ ಸಂಖ್ಯೆ 23:** ಬೆಂಗಳೂರು ವಿಶ್ವವಿದ್ಯಾಲಯದ 53ನೇ ಮಿನಿ ಘಟಿಕೋತ್ಸವದಲ್ಲಿ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪ್ರಧಾನ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ 53ನೇ ಮಿನಿ ಘಟಿಕೋತ್ಸವದಲ್ಲಿ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ಹಾಗೂ ಪದವಿಗಳನ್ನು ಸ್ವೀಕರಿಸಲಿರುವ ಅಭ್ಯರ್ಥಿಗಳ ಪದವಿ ಪ್ರಧಾನ ಪಟ್ಟಿಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 15 ಮತ್ತು 15.1ರ ಪ್ರಕಾರ ಪರಿಗಣಿಸಿ ಸಿಂಡಿಕೇಟ್ ಅನುಮೋದಿಸಿತು.

*Proceedings of the 143rd meeting of the Syndicate held on 24.09.2018*

**ವಿಷಯ ಸಂಖ್ಯೆ 24:** ಶ್ರೀ ಮುನಿಪೂಜಪ್ಪ, ಅನುಚರರು, ವಾಣಿಜ್ಯ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಇವರು ಅನಧಿಕೃತ ಗೈರು ಹಾಜರಾಗಿರುವುದರಿಂದ ಇವರಿಗೆ ತಯಾರಿಸಲಾದ ದೋಷರೋಪಣಾ ಪಟ್ಟಿಯ (Articles of charges) ಅನುಮೋದನೆಯ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಶ್ರೀ ಮುನಿಪೂಜಪ್ಪ, ಅನುಚರರು, ವಾಣಿಜ್ಯ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಇವರು ಅನಧಿಕೃತ ಗೈರುಹಾಜರಾತಿಯ ಬಗ್ಗೆ, ಬೆಂಗಳೂರು ವಿಶ್ವವಿದ್ಯಾಲಯ ಪರಿನಿಯಮಾವಳಿ 28.8 (3)ರ ಅನುಸಾರ, ಶಿಸ್ತಿನ ಕ್ರಮ ಜರುಗಿಸಲು ಸಿದ್ದಪಡಿಸಿರುವ

ದೋಷರೋಪಣಾ ಪಟ್ಟಿಗಳನ್ನು (Article of Charges) ಸಿಂಡಿಕೇಟ್ ಅನುಮೋದಿಸಿ, ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸಲು ಕುಲಪತಿಗಳಿಗೆ ಅಧೀಕರಿಸಿ ನಿರ್ಣಯಿಸಿತು.



**ವಿಷಯ ಸಂಖ್ಯೆ 25:** ಬೆಂಗಳೂರು ವಿಶ್ವವಿದ್ಯಾಲಯದ ಕಂಪ್ಯೂಟರ್ ವಿಜ್ಞಾನ ಇಂಜಿನಿಯರಿಂಗ್ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ/ಮಾಸಿಕ ವೇತನದ ತಾತ್ಕಾಲಿಕ 5 ಜನ ನೌಕರರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 62286-62290/2016 ಸಲ್ಲಿಸಿದ್ದು ಅದಕ್ಕೆ ಸಂಬಂಧಿಸಿದಂತೆ ನೀಡಿರುವ ಆದೇಶದ ಬಗ್ಗೆ ಕ್ರಮತೆಗೆದುಕೊಳ್ಳಲು

**ಮತ್ತು**

ನೌಕರರ ಸೇವೆ ಮುಂದುವರಿಸಿ ಹಾಗೂ ವೇತನವನ್ನು ಹೆಚ್ಚಿಸಿರುವುದನ್ನು ಅನುಸಮರ್ಥಿಸುವ ಬಗ್ಗೆ

**ನಿರ್ಣಯ:**

ರಿಟ್ ಅರ್ಜಿ ಸಂಖ್ಯೆ 62286-62290/2016ರಲ್ಲಿ ಮಾನ್ಯ ಉಚ್ಚನ್ಯಾಯಾಲಯ ನೀಡಿರುವ ದಿನಾಂಕ: 07-06-2018ರ ತೀರ್ಪಿನ ಮೇರೆಗೆ, ಬೆಂಗಳೂರು ವಿಶ್ವವಿದ್ಯಾಲಯದ ಕಂಪ್ಯೂಟರ್ ವಿಜ್ಞಾನ ಇಂಜಿನಿಯರಿಂಗ್ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ದಿನಗೂಲಿ/ಮಾಸಿಕ ವೇತನದ ತಾತ್ಕಾಲಿಕ 6 ಜನ ನೌಕರರು ಸಲ್ಲಿಸಿರುವ ಮನವಿಯನ್ನು ಸೂಕ್ತವಾಗಿ ಪರಿಗಣಿಸಿ ಅವರ ಹಿಂದಿನ ಸೇವಾ ಷರತ್ತು ಮತ್ತು ನಿಬಂಧನೆಯಂತೆ ಕಾರ್ಯನಿರತ ಎರಡು ದಿವಸಗಳ ಬಿಡುವು ನೀಡಿ ದಿನಾಂಕ 30.5.2018 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಿ, ಅವರ ವೇತನವನ್ನು ಮಾಹೆಯಾನ ರೂ.12,500/- ರಿಂದ ರೂ.19,000/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

1. ಶ್ರೀನಿವಾಸ ಕೆ.ವಿ.
2. ಗೋಪಾಲಕೃಷ್ಣ ಕೆ.ಎಂ.
3. ಮಲ್ಲಿಕಮ್ಮ
4. ಶ್ರೀನಿವಾಸ ಕೆ.ಎಸ್.
5. ಬಾಬು ಎಲ್.ಎನ್.
6. ಹರೀಶ. ಟಿ

*Proceedings of the 143rd meeting of the Syndicate held on 24.09.2018*

**Item No. 26**: Approval of MoU between Bangalore University and Indira Gandhi National Centre for Arts, New Delhi.

***Resolution:***

After discussion, the Syndicate resolved to approve the Memorandum of Understanding between Bangalore University and Indira Gandhi National Centre for Arts.

*Proceedings of the 143rd meeting of the Syndicate held on 24.09.2018*

**Item No. 27:** Approval of MoU between Bangalore and Florida International University, USA.

***Resolution:***

After discussion, the Syndicate resolved to approve the Memorandum of Understanding between Bangalore University and Florida International University, USA.

*Proceedings of the 143rd meeting of the Syndicate held on 24.09.2018*

**ವಿಷಯ ಸಂಖ್ಯೆ 28:** 2017–18ನೇ ಸಾಲಿನ ಸರ್ಕಾರಿ ಕೋಟಾದಡಿ ಖಾಲಿ ಉಳಿದ ಬಿ.ಇಡಿ ಸೀಟುಗಳನ್ನು ಆಡಳಿತ ಮಂಡಳಿಯಿಂದ ಭರ್ತಿ ಮಾಡಿಕೊಂಡಿರುವ ಹೊರ ರಾಜ್ಯದ ವಿದ್ಯಾರ್ಥಿಗಳ ಪ್ರವೇಶವನ್ನು ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, ಎಸ್.ಸಿ.ಟಿ. ಕಾಲೇಜ್ ಆಫ್ ಎಜುಕೇಷನ್, ಬೆಂಗಳೂರು, ಇವರು ಪ್ರಥಮ ಸೆಮಿಸ್ಟರ್ ಬಿ.ಇಡಿ. ಕೋರ್ಸಿಗೆ 2017–18ನೇ ಸಾಲಿನಲ್ಲಿ, ಸರ್ಕಾರಿ ಕೋಟಾದಡಿಯಲ್ಲಿ ಖಾಲಿ ಉಳಿದಿದ್ದ 15 (ಹದಿನೈದು) ಸೀಟುಗಳಿಗೆ ಕರ್ನಾಟಕೇತರ ವಿದ್ಯಾರ್ಥಿಗಳಿಂದ ಮಾಡಿಕೊಂಡಿರುವ ಪ್ರವೇಶಾತಿಗೆ ತಲಾ ರೂ.5,000/–ಗಳಂತೆ ದಂಡಶುಲ್ಕವನ್ನು ವಸೂಲು ಮಾಡಿ ಹಾಗೂ ಈ ಪ್ರವೇಶಾತಿಗಳಿಗೆ ಸರ್ಕಾರದ ಅನುಮೋದನೆಯನ್ನು ಪಡೆಯುವ ಷರತ್ತಿಗೊಳಪಟ್ಟು ಅಂತಹ ವಿದ್ಯಾರ್ಥಿಗಳ ಪ್ರವೇಶ ಅನುಮೋದನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. ಈ ಬಗ್ಗೆ ವಿಶ್ವವಿದ್ಯಾಲಯದಿಂದ ಸರ್ಕಾರಕ್ಕೆ ಪತ್ರ ಬರೆಯಲು ಸಹ ಸೂಚಿಸಿತು.

**Item No. 29:** Permission to utilize the services of Studio Technician and Studio Assistant to the Department of Electronic Media, BUB on yearly basis from 03.07.2018 to 30.06.2019.

***Resolution:***

After discussion, Syndicate resolved to accord permission to the Co-ordinator, Electronic Media course to continue to utilize the services of a Studio Technician and one Studio Assistant for a period from 03.07.2018 to 30.06.2019. For further period, the Co-ordinator be permitted to engage the services of Studio Technician / Studio Assistant only in case they have acquired the required qualification by that time.

Further, it was resolved that the details of other temporary appointments made in the Electronic Media and their qualifications be furnished before the next meeting of the Syndicate.

*Proceedings of the 143rd meeting of the Syndicate held on 24.09.2018*

**Item No. 30:** Celebrations of 128th birth anniversary of Baba Saheb Dr. B.R. Ambedkar –reg.

***Resolution:***

After discussion, the Syndicate resolved to approve the proposal as per the agenda note and directed to send a circular to the affiliated colleges of Bangalore University immediately.

*Proceedings of the 143rd meeting of the Syndicate held on 24.09.2018*

**Item No. 31:** Celebrations of 150th birth anniversary of Mahatma Gandhi-reg.

***Resolution:***

After discussion, the Syndicate resolved to approve the proposal as per the agenda note and directed to send a circular to the affiliated colleges of Bangalore University immediately.

**Item No. 32:** Celebrations of 125th anniversary of Swami Vivekananda's Speech at 'The Parliament of World's Religions' in Chicago – reg.

***Resolution:***

Sri Vasantha Kumara suggested to establish Buddhist and Vivekananda Study Centres at the University and also to send a proposal to the U.G.C. for the financial assistance.

Sri Shivanna B, informed that the Department of Kannada and Culture, Government of Karnataka is providing books on Baba Saheb Dr. B.R. Ambedkar, Swamy Vivekananda and Mahathma Gandhi on concessional rates. He requested to send a proposal in this regard and also to constitute a Committee to monitor the implementation of above proposals by the colleges.

After discussion, the Syndicate resolved to approve the proposal as per the agenda note and directed to send a circular to the affiliated colleges of Bangalore University immediately.

Further, the Syndicate authorised the Vice-Chancellor to constitute a Committee to monitor the above proposals.



**ವಿಷಯ ಸಂಖ್ಯೆ 33:** ಶ್ರೀ ಸಿ.ಟಿ. ಭಾಸ್ಕರ್ ಮತ್ತು ಕೆ.ಎಸ್. ನಾಗೇಶ್ ಇವರುಗಳು 1994 ರಿಂದ ದತ್ತಾಂಶ ನಮೂದಕ (Data Entry Operator) ಹುದ್ದೆಯನ್ನು ಕೋರಿರುವ ಬಗ್ಗೆ.

**ನಿರ್ಣಯ:**

ವಿಷಯವನ್ನು ಮುಂದೂಡಲಾಯಿತು.

**Item No. 34:** Ratification of review results of I Semseter M.Com. paper 1.5: Advance Financial Management Examination December 2017/January 2018.

***Resolution:***

Members expressed that after review of results of I Semseter M.Com. paper 1.5: Advance Financial Management (AFM) of December 2017/

January 2018 examination, nearly 60% of the students have passed. In view of this the matter be viewed seriously and action should be taken against errant valuers who have valued the scripts first time.

After detailed discussions, the Syndicate resolved to ratify the action taken by the University for review of results of I Semseter M.Com. paper 1.5: Advance Financial Management (AFM) of December 2017/ January 2018 examination. Further, it was resolved to constitute the following Committee to enquire into the alleged negligence of the valuers who have valued the scripts of the above examination.

1. Prof. N.S. Ashok Kumar - Chairman
   Dean, Faculty of Science and Member of the Syndicate
2. Prof. M.J. Vinod - Member
   Dean, Faculty of Arts
3. Sri Shivanna B - Member
   Member of the Syndicate
4. Sri Shivanna - Convenor
   Dy.Registrar, Examination Branch

**ವಿಷಯ ಸಂಖ್ಯೆ 35:** 2013ನೇ ಸಾಲಿನಲ್ಲಿ ಪ್ರವೇಶ ಪಡೆದ ಸಂಶೋಧನಾ ವಿದ್ಯಾರ್ಥಿಗಳಿಗೆ ಒಂದು ವರ್ಷ ಹೆಚ್ಚುವರಿಯಾಗಿ ವಿದ್ಯಾರ್ಥಿವೇತನ ಮಂಜೂರು ಮಾಡುವ ಬಗ್ಗೆ ಮತ್ತು ವಿದ್ಯಾರ್ಥಿ ವೇತನದ ಹಿಂಬಾಕಿ ಹಣವನ್ನು ಮಂಜೂರು ಮಾಡುವ ಬಗ್ಗೆ.

**ನಿರ್ಣಯ:**

ಚರ್ಚೆಯ ನಂತರ, 2013ನೇ ಸಾಲಿನಲ್ಲಿ ಪ್ರವೇಶ ಪಡೆದ ಸಂಶೋಧನಾ ವಿದ್ಯಾರ್ಥಿಗಳಿಗೆ ಒಂದು ವರ್ಷ ಹೆಚ್ಚುವರಿಯಾಗಿ ವಿದ್ಯಾರ್ಥಿವೇತನ ಮಂಜೂರು ಮಾಡುವ ಬಗ್ಗೆ ಸರ್ಕಾರ ಮತ್ತು ವಿಶ್ವವಿದ್ಯಾಲಯದ ನಿಯಮಾವಳಿಗಳಲ್ಲಿ ಯಾವುದೇ ಅವಕಾಶ ಇರದಿರುವ ಕಾರಣ ಹಾಗೂ ವಿಶ್ವವಿದ್ಯಾಲಯದ ತ್ರಿಭಜನೆಯ ನಂತರ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲ ಕೊರತೆಯ ಕಾರಣ, ಸಂಶೋಧನಾ ವಿದ್ಯಾರ್ಥಿಗಳಿಗೆ ಅವಧಿ ಮೀರಿ ವಿದ್ಯಾರ್ಥಿ ವೇತನ ಮತ್ತು ಇತರೆ ವೆಚ್ಚಗಳನ್ನು ಭರಿಸುವುದು ಕಷ್ಟ–ಸಾಧ್ಯವೆಂದು ಪರಿಗಣಿಸಿತು. ಮುಂದುವರೆದು, ವಿಶ್ವವಿದ್ಯಾಲಯದ ಪಿ.ಹೆಚ್.ಡಿ.

ನಿಯಮಾವಳಿಗಳಲ್ಲಿ ಐದು ವರ್ಷಗಳ ನಂತರ, ಸಾರಾ-ಸಗಟಾಗಿ ಸಂಶೋಧನಾ ಅವಧಿಯನ್ನು ವಿಸ್ತರಿಸುವ ಬಗ್ಗೆ ನಿರ್ಬಂಧವಿರುತ್ತದೆ. ಆದ ಕಾರಣ, ಈ ಬಗ್ಗೆ ವಿದ್ಯಾರ್ಥಿಗಳಿಗೆ ಒಂದು ವರ್ಷ ಹೆಚ್ಚುವರಿ ವಿದ್ಯಾರ್ಥಿ ವೇತನ ಮತ್ತು ಇತರ ಸೌಲಭ್ಯಗಳನ್ನು ನೀಡುವ ಬಗ್ಗೆ ಒಂದು ವರದಿಯನ್ನು ಸಲ್ಲಿಸಿ ಸರ್ಕಾರದಿಂದ ಅನುದಾನ ಕೋರಲು ಈ ಕೆಳಕಂಡ ಸಮಿತಿಯನ್ನು ರಚಿಸಲು ನಿರ್ಣಯಿಸಿತು:

| | | |
|---|---|---|
| 1. ಶ್ರೀ ಶಿವಣ್ಣ ಬಿ<br>ಸಿಂಡಿಕೇಟ್ ಸದಸ್ಯರು, | – | ಅಧ್ಯಕ್ಷರು |
| 2. ಕುಲಸಚಿವರು (ಮೌಲ್ಯಮಾಪನ) | – | ಸದಸ್ಯರು |
| 3. ಶ್ರೀ ವಸಂತ ಕುಮಾರ<br>ಸಿಂಡಿಕೇಟ್ ಸದಸ್ಯರು, | – | ಸದಸ್ಯರು |
| 4. ಪ್ರೊ. ಎನ್.ಎಸ್. ಅಶೋಕ್ ಕುಮಾರ್,<br>ಡೀನರು, ವಿಜ್ಞಾನ ನಿಕಾಯ | – | ಸದಸ್ಯರು |
| 5. ಪ್ರೊ. ಎಂ.ಜೆ. ವಿನೋದ್,<br>ಡೀನರು ಕಲಾ ನಿಕಾಯ, | – | ಸದಸ್ಯರು |
| 6. ಪ್ರೊ. ಸುದೇಶ್ ವಿ,<br>ಡೀನರು, ಕಾನೂನು ನಿಕಾಯ, | – | ಸದಸ್ಯರು |
| 7. ಪ್ರೊ. ಕೆ. ರಾಮಕೃಷ್ಣಯ್ಯ,<br>ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, | – | ಸದಸ್ಯರು |
| 8. ಪ್ರೊ. ಎಂ. ನಾರಾಯಣಸ್ವಾಮಿ,<br>ವಿಶೇಷಾಧಿಕಾರಿ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಕೋಶ | – | ಸದಸ್ಯ ಕಾರ್ಯದರ್ಶಿ |

**Item No. 36:** To consider the report of the Expert Committee constituted for recognition of the Indira Gandhi National Centre for Arts, Regional Centre, Bengaluru, as Centre for Specified Studies/Specialized Studies-reg.

***Resolution:***

After discussion, the Syndicate considered the report of the Expert Committee under the Chairmanship of the Vice-Chancellor, Bangalore

University, Bengaluru and resolved to recognize Indira Gandhi National Centre for Arts, Regional Centre, Bengaluru, as a Centre for Specified Studies/Specialized Studies under the provisions of Section 66 (1) of Karnataka State Universities Act, 2000, for conduct of the following courses:

1. PG Diploma in Manuscriptology& Palaeography
2. PG Diploma in Interdisciplinary Studies in Indian Classical Music
3. MA in Interdisciplinary Indian Classical Music Research
4. Certificate Courses in Research Methods in Manuscriptology& Palaeography
5. Research Centre for Ph.D. programme.

**ವಿಷಯ ಸಂಖ್ಯೆ 37:** ದಿನಾಂಕ: 28–06–2018ರಂದು ನಡೆದ ಕೇಂದ್ರ ಖರೀದಿ ಸಮಿತಿ ನಡಾವಳಿ ಅನುಮೋದನೆ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ದಿನಾಂಕ 28–06–2018 ರಂದು ನಡೆದ ಕೇಂದ್ರ ಖರೀದಿ ಸಮಿತಿ ನಡಾವಳಿಗಳನ್ನು ವಿಶ್ವವಿದ್ಯಾಲಯದ ಖರೀದಿ ನಿಯಮಾವಳಿ ಸೆಕ್ಷನ್ 5.3ರ ಪ್ರಕಾರ ಪರಿಗಣಿಸಿ ಸಿಂಡಿಕೇಟ್ ಅನುಮೋದಿಸಿತು.

ಶ್ರೀ ವಸಂತ ಕುಮಾರ ಅವರು ಮಾತನಾಡಿ, ವಿಶ್ವವಿದ್ಯಾಲಯದ ಈಜು ಕೊಳದ ನಿರ್ವಹಣೆ ಬಗ್ಗೆ ಟೆಂಡರ್ ಕರೆದಿದ್ದು, ಟೆಂಡರ್ ಅನ್ನು ಅಂತಿಮಗೊಳಿಸುವ ಬಗ್ಗೆ ಈ ಹಿಂದೆ ಒಂದು ಸಮಿತಿಯು ವರದಿಯನ್ನು ನೀಡಿತ್ತು. ಈ ವರದಿಯನ್ನು ಅನುಮೋದಿಸಿರದ ಕಾರಣ ಮತ್ತೊಮ್ಮೆ ಸಭೆ ನಡೆಸಿ ಮರು–ಪರಿಶೀಲಿಸಿ ವರದಿಯನ್ನು ಪಡೆದು ಮುಂದಿನ ಕ್ರಮ ಕೈಗೊಳ್ಳಬಹುದಾಗಿದೆ ಎಂದು ಅಭಿಪ್ರಾಯ ಪಟ್ಟರು. ಕುಲಪತಿಗಳು ಮಾತನಾಡಿ ವಿಶ್ವವಿದ್ಯಾಲಯದಿಂದ ಬರುವ ಮೊತ್ತದಿಂದಲೇ ಈಜು–ಕೊಳ ನಿರ್ವಹಣೆಗೆ ಟೆಂಡರ್‌ದಾರರಿಗೆ ಹಣ ಪಾವತಿಸಲು ಸಾಧ್ಯವಿರದ ಕಾರಣ, ಈ ಟೆಂಡರ್ ಅನ್ನು ಅಂತಿಮಗೊಳಿಸಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ, ಮತ್ತೊಮ್ಮೆ ಟೆಂಡರ್ ಕರೆಯಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

**ವಿಷಯ ಸಂಖ್ಯೆ 38:** ದಿನಾಂಕ: 20-09-2018ರಂದು ನಡೆದ ಕೇಂದ್ರ ಖರೀದಿ ಸಮಿತಿ ನಡಾವಳಿ ಅನುಮೋದನೆ ಕುರಿತು.

**ನಿರ್ಣಯ:**

ಚರ್ಚೆಯ ನಂತರ, ವಿವಿಧ ಸಲಕರಣೆಗಳು, ಉಪಕರಣಗಳು, ರಾಸಾಯನಿಕ ವಸ್ತು ಮುಂತಾದುವುಗಳ ಖರೀದಿ ಕುರಿತು ವಿಶ್ವವಿದ್ಯಾಲಯದ ವಿಭಾಗಗಳ ಪ್ರಸ್ತಾವನೆ ಬಗ್ಗೆ ದಿನಾಂಕ 20-09-2018 ರಂದು ನಡೆದ ಕೇಂದ್ರ ಖರೀದಿ ಸಮಿತಿ ನಡಾವಳಿಗಳನ್ನು ವಿಶ್ವವಿದ್ಯಾಲಯದ ಖರೀದಿ ನಿಯಮಾವಳಿ ಸೆಕ್ಷನ್ 5.3ರ ಪ್ರಕಾರ ಪರಿಗಣಿಸಿ ಸಿಂಡಿಕೇಟ್ ಅನುಮೋದಿಸಿತು.

**ವಿಷಯ ಸಂಖ್ಯೆ 39:** ವಿದ್ಯಾರ್ಥಿನಿಲಯದ ಕೊಠಡಿ ಬಾಡಿಗೆ ಪರಿಷ್ಕರಿಸುವ ಬಗ್ಗೆ

**ನಿರ್ಣಯ:**

ಚರ್ಚೆಯ ನಂತರ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಪಡೆದಿರುವ ಪೇಯಿಂಗ್ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕೊಠಡಿ ಬಾಡಿಗೆ ದರವನ್ನು ಪರಿಷ್ಕರಿಸಿ ವರ್ಷಕ್ಕೆ ರೂ.500/-ಗಳನ್ನು ಬಾಡಿಗೆ ದರವಾಗಿ ನಿಗಧಿಪಡಿಸಲು ಸಿಂಡಿಕೇಟ್ ನಿರ್ಣಯಿಸಿತು. ಮುಂದುವರೆದು, ಈ ಪರಿಷ್ಕೃತ ದರವು, ಸಿಂಡಿಕೇಟ್ ನಿರ್ಣಯದ ದಿನಾಂಕದಿಂದ ಜಾರಿಗೆ ಮಾಡಲು ಹಾಗೂ ಈಗಾಗಲೇ ಪಾವತಿ ಮಾಡಿರುವ ಬಾಡಿಗೆ ದರವನ್ನು ಮರುಪಾವತಿಸದೇ ಇರಲು ಸಿಂಡಿಕೇಟ್ ನಿರ್ಣಯಿಸಿತು.

**Item No. 40:** Proceedings of the 53rd Works Committee Meeting held on 20th September 2018, in the board room, Jnana Jyothi Covention Centre, Central College Campus, Bangalore University, Bangalore.

***Resolution:***

After discussion, the Syndicate approved the proceedings of the Works Committee Meeting held on 20th September 2018.

**GENERAL DISCUSSIONS:**

1. The Registrar (Evaluation) informed that the results of previous B.Ed. examinations was processed manually. He requested to continue the same practice for the 1st and 3rd semesters B.Ed. examinations 2017-18. After discussions, the Syndicate resolved to permit manual coding, de-coding and tabulation work of 1st and 3rd semesters B.Ed. examinations 2017-18 scheduled to commence from 26-09-2018.

2. Prof. N.S. Ashok Kumar, briefed the Syndicate about the difficulties being faced by the Ph.D. Students of some of the Departments in getting their progress reports forwarded to the Registrar (Evaluation) and requested to authorise the respective Guides to forward the progress reports of the Ph.D. students working under them to the Registrar (Evaluation). In case of differences between the Guide and the students NoC may be issued to the students for change of Guide and also the teachers. He urged to constitute a committee to suggest guidelines. After detailed discussions, it was resolved to constitute a Standing Committee as under to take a decision on individual cases, as and when such instances are reported :

    1. The Vice-Chancellor - Chairman
    2. The Registrar - Member
    3. The Registrar(Evaluation) - Member
    4. The Chairperson of the concerned department - Member
    5. Concerned Research Guide - Member
    6. Asst. Registrar/Superintentendent, Ph.D. Section - Convenor

3. Sri Shivanna B suggested to introduce the following combinations at the degree level.

    1. B.A. Journalism, Psychology, Criminology
    2. B.A. Psychology, Optional English, Criminology/ Forensic Science
    3. B.A. Journalism, Public Administration, Criminology

   It was informed by the Vice-Chancellor that a Committee has already been proposed to introduce the new courses at U.G. and P.G. level including the above courses.

4. Sri Shivanna B, suggested to appoint some outsource persons for smooth functioning of Ramanagara PG Centre. The Vice-Chancellor informed that a Circular will be sent to all the employees to send their consent, if they are willing to work at Ramanagara PG Centre. If no University employee including outsource persons are willing to work at Ramanagara PG Centre, then alternative arrangements will be made.

5. Sri Shivanna B, wanted to know the action taken by the University on the report of the Syndicate Sub-Committee submitted under the Chairmanship of Sri Jayanna, the then Syndicate member with regard to MBA SAP programme. The Vice-Chancellor informed the Syndicate that His Excellency the Chancellor has also sought a report with regard to alleged misappropriation in introduction of SAP programme. A meeting of all the faculty members and the Dean of Commerce was also held on 04-09-2018 on the matter and a decision was taken to inform all the MBA colleges, not to collect any fees for the project work by MBA students. All the details in this regard will be placed before the next Syndicate meeting.

6. Members wanted to re-constitute the Works Committee, Finance Committee and Central Purchase Committees. After detailed discussions, it was resolved to nominate the following members to the committees as shown against them:
    a. Sri Shivanna B - Central Purchase Committees
    b. Sri Vasantha Kumara - Works Committee,

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಸಹಿ/-
**ಕುಲಸಚಿವರು**

ಸಹಿ/-
**ಕುಲಪತಿಯವರು**

//ಪ್ರತಿ//

ಕುಲಸಚಿವರು